# ನೆನಪೇ ಕಣ್ಣೀರ ಹನಿಯಾಗಿ..!

ಮಹೇಶ್ ವಿ.

ಆ ದಿನ ಎಲ್ಲರ ಕಣ್ಣಂಚಿನಲ್ಲೂ ಹನಿ ಮಧುವಿನಂತೆ ಜಿನುಗುತ್ತಿತ್ತು. ವಿ.ವಿ ಕ್ಯಾಂಪಸ್‌ನಲ್ಲಿ ನಾವು ಅಡ್ಡಾಡಿದ ಎರಡು ವರ್ಷದ ಆ ದಿನಗಳು ನೆನಪಿಗೆ ಬಂದು ಒಂದು ನಿಮಿಷ ಭೋರ್ಗರೆವ ಜಲಪಾತವೇ ನಿಶ್ಶಬ್ದವಾದಂತಹ ಅನುಭವದ ಶೂನ್ಯ ನಮ್ಮಲ್ಲಿ ಕಾಡಿತು.

ಕ್ಲಾಸ್ ರೂಮಿನ ಬೆಂಚುಗಳು, ಹರ್ಮನ್ ಮೋರ್ಗ್ಲಿಂಗ್ ಸಭಾಂಗಣ, ಕಾರಿಡಾರ್ ಮತ್ತು ನೋಟಿಸ್ ಬೋರ್ಡ್‌ನಲ್ಲಿ ಎದ್ದು ಕಾಣುತ್ತಿದ್ದ ನಮ್ಮ ನಾಮಫಲಕಗಳು ಮತ್ತೆ ಯಾವಾಗ ಬರುತ್ತೀರಾ ಎಂದು ಪ್ರಶ್ನಿಸುತ್ತಿದ್ದವು. ಪ್ರಥಮ ವರ್ಷದ ಸ್ನೇಹಿತರು ಆಯೋಜಿಸಿದ ಬೀಳ್ಕೊಡುಗೆ ಸಮಾರಂಭ ಮೇಲ್ನೋಟದಲ್ಲಿ ಸಮಚಿತ್ತದಿಂದ ಮೌನವಾಗಿತ್ತು.



ದಾಂಡೇಲಿ ಪ್ರವಾಸದಲ್ಲಿ ಸ್ನೇಹಿತರೊಂದಿಗೆ ಕಳೆದ ಕ್ಷಣ

ಈಗ ನಾವು ಮೈಸೂರಿನ ಮಾನಸಗಂಗೋತ್ರಿಯ ಪತ್ರಿಕೋದ್ಯಮ ವಿಭಾಗದ ಹಳೆಯ ವಿದ್ಯಾರ್ಥಿಗಳು ಕಾಲೇಜಿನ ಕೊನೆಯ ದಿನ ನಮ್ಮ ಅಧ್ಯಾಪಕರಾದ ಮಹೇಶ್ ಚಂದ್ರಗುರು ಅವರ ಮಾತು ನಮ್ಮಲ್ಲಿ ನವಚೈತನ್ಯ ತುಂಬಿ ಸುಂದರ ಅನುಭವಗಳು ಕಾಣಸಿಗುವಂತೆ ಮಾಡಿತ್ತು. ಒಬ್ಬ ಹುಡುಗ ಒಂದು ಹುಡುಗಿಗೆ ಅಥವಾ ಒಂದು ಹುಡುಗಿ ಒಬ್ಬ ಹುಡುಗಿಗೆ ಡಾರ್ಲಿಂಗ್ ಅನ್ನುವುದಲ್ಲ, ನೀವು ಸಮಾಜಕ್ಕೆ ಡಾರ್ಲಿಂಗ್ ಆಗಬೇಕು. ಆಗ ನೀವು ಅಳಿದ ಮೇಲೂ ಜೀವಂತಿಕೆಯನ್ನು ಪಡೆದುಕೊಳ್ಳುತ್ತೀರಿ ಎನ್ನುತ್ತಿದ್ದರು.

ಕ್ಯಾಂಪಸ್ ಕಲರವ

ಅವರ ಮಾತುಗಳನ್ನು ಆದರ್ಶ ವಾಕ್ಯಗಳಂತೆ ಕೇಳುತ್ತಾ ಬೆಳೆದೆವು. ಹೀಗೆ ಕಾಲೇಜಿನ ಕೊನೆಯ ದಿನಗಳು ಹತ್ತಿರವಾಗಿದ್ದೇ ತಿಳಿಯಲಿಲ್ಲ, ನಮ್ಮ ಬೀಳ್ಕೊಡುಗೆ ಬಂದೇ ಬಿಟ್ಟಿತು. ಸಂಭ್ರಮಿಸಲು ಸಜ್ಜಾಗಿದ್ದ ಹರ್ಮನ್ ಮೋರ್ಗ್ಲಿಂಗ್ ಸಭಾಂಗಣ ಮಧುವಣಗಿತ್ತಿಯಂತೆ ಸಿಂಗಾರಗೊಂಡಿತ್ತು. ಆಕರ್ಷಣೀಯ ದೀಪಗಳು, ತೋರಣಗಳಂತೆ ಸಿಂಗರಿಸಿದ್ದ ನಮ್ಮ ಚಿತ್ರಪಟಗಳು ನಮ್ಮನ್ನು ವಿಶೇಷವಾಗಿ ಸ್ವಾಗತಿಸಿದವು.

ಶಾಲೆಯ ಮಕ್ಕಳಂತೆ ಕಾಣುತ್ತಿದ್ದ ನಮ್ಮ ಕ್ಲಾಸ್ ಮೇಟ್ ಹುಡುಗಿಯರು ಅಂದು ಬಣ್ಣ, ಬಣ್ಣದ ಸೀರೆ, ಗೌನ್‌ಗಳನ್ನು ಧರಿಸಿ ದೇವ ಕನ್ಯೆಯರಂತೆ ಕಂಗೊಳಿಸುತ್ತಿದ್ದರು. ಅದರಲ್ಲಂತೂ ರೋಷನ್ ಆರಾ ಮತ್ತು ಆಶಾ ಅವರ ಮಾಡಿಕೊಂಡ ಮೇಕಪ್ ಸಹಜವಾಗಿ ದುಬಾರಿ ಎನ್ನಿಸಿತು.

ಹುಡುಗರೂ ಪಂಚೆ- ಶಲ್ಯ ಧರಿಸಿ ಹುಡುಗಿಯರಿಗಿಂತ ನಾವೇನು ಕಮ್ಮಿಯಿಲ್ಲ ಎಂಬಂತೆ ಸಾಂಪ್ರದಾಯಿಕ ದಿರಿಸಿನಲ್ಲಿ ಬಂದಿದ್ದರು. ಸಭಾಂಗಣದ ತುಂಬೆಲ್ಲಾ ಸಂಭ್ರಮದ ವಾತಾವರಣವಿದ್ದರೆ, ಸ್ನಾತಕಪದವಿ ಮುಗಿಯಿತಲ್ಲ ಎಂಬ ಚಿಂತೆ ನಮ್ಮನ್ನು ಬಿಡದಂತೆ ಆವರಿಸಿತ್ತು. ಒಲ್ಲದ ಮನಸ್ಸಿನಿಂದ ಹಸಿರು ಗಂಗೋತ್ರಿಯ ಅಂಗಳಕ್ಕೆ ವಿದಾಯ ಹೇಳುವಾಗ ಹೃದಯವೇ ಭಾರವೆನಿಸಿತ್ತು. ವಿದ್ಯಾರ್ಥಿ ಜೀವನ ಚಿನ್ನದ ಕ್ಷಣಗಳೆನ್ನುವುದು ಅಕ್ಷರಶಃ ಅಂದು ಸತ್ಯ ಎನ್ನಿಸಿತು.

ನಮ್ಮ ತರಗತಿಯಲ್ಲಿ ಇದ್ದ 33 ವಿದ್ಯಾರ್ಥಿಗಳೂ ಒಂದೊಂದು ರೀತಿ ವಿಶೇಷ ಗುಣ ಹೊಂದಿದ್ದರು. ಆದರೆ, ಯಾರಿಗಾದರೂ ಸಮಸ್ಯೆ ಬಂದರೆ ಎಲ್ಲರೂ ಒಂದುಗೂಡುತ್ತಿದ್ದರು.

ಕ್ಯಾಂಪಸ್‌ನಲ್ಲಿ ಪ್ರತಿಭಟನೆ ನಡೆದರೇ ನಾವೇ ಮುಂದಿರುತ್ತಿದ್ದೆವು. ಹಾಸ್ಟೆಲ್‌ನಲ್ಲಿ ಮಾವು- ಹಲಸನ್ನು ಕದ್ದು ತಿಂದದ್ದು, ಮತ್ತೊಬ್ಬರ ರೂಮಿನಿಂದ ನೇರಳೆ ಹಣ್ಣು ತರುತ್ತಿದ್ದದ್ದು, ಸ್ನೇಹಿತನೊಂದಿಗೆ ಸುಖಾ ಸುಮ್ಮನೇ ಹರಟೆ ಕೊಚ್ಚಿದ್ದು ಹೀಗೆ ಎರಡು ವರ್ಷದಲ್ಲಿ ನಾವು ಮಾಡಿದ ತುಂಟತನದ ನೆನಪುಗಳು ಈಗ ಕಣ್ಣೀರ ಹನಿಯಾಗಿ ಕಾಡಿವೆ.

## ಮುನ್ನೋಟ

### ಜೂನ್ 22, ಶನಿವಾರ

**ಗ್ರೀಷ್ಮ ರಂಗೋತ್ಸವ**



ರಾಜ್ಯದ ಹವ್ಯಾಸಿ ರಂಗತಂಡಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರಂಗಾಯಣವು ಗ್ರೀಷ್ಮ ರಂಗೋತ್ಸವ ಅಂಗವಾಗಿ ನಾಟಕ ಹಮ್ಮಿಕೊಂಡಿದೆ.

ಇತ್ತೀಚೆಗೆ ನಿಧನರಾದ ರಂಗನಟಿ ಹಾಗೂ ರಂಗ ನಿರ್ದೇಶಕಿ ಎಸ್.ಮಾಲತಿ ಅವರಿಗೆ ಈ ರಂಗೋತ್ಸವವನ್ನು ಅರ್ಪಿಸಿದ್ದು, ವಿವಿಧ ನಾಟಕಗಳು ಪ್ರದರ್ಶನಗೊಂಡಿವೆ.

ಅದರಂತೆ ಜೂನ್ 22ರಂದು ಮಂಡ್ಯದ ಜನದನಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಮಂಜುನಾಥ ಎಲ್.ಬಡಿಗೇರ ನಿರ್ದೇಶನದಲ್ಲಿ ಪ್ರಸನ್ನ ಅವರ ರಚನೆಯ 'ಮಹಿಮಾಪುರ' ಹಾಗೂ ಜೂನ್ 23ರಂದು ತೀರ್ಥಹಳ್ಳಿಯ ನಟ ಮಿತ್ರರು ತಂಡದಿಂದ ಗೋಪಾಲಕೃಷ್ಣ ಪೈ ಅವರ ಕಾದಂಬರಿ 'ಸ್ವಪ್ನ ಸಾರಸ್ವತ' ರಂಗರೂಪ ಪ್ರದರ್ಶನವಿದೆ.

ಇದರ ರಂಗರೂಪ ಎಸ್.ಮಾಲತಿ ಅವರದ್ದು. ನಾಟಕಗಳು ಸಂಜೆ 6.30ಕ್ಕೆ ಪ್ರದರ್ಶನಗೊಳ್ಳಲಿವೆ. ಪ್ರತಿ ನಾಟಕಕ್ಕೆ ₹50 ಶುಲ್ಕವಿದೆ.

**'ಆಧುನಿಕ ಸಮಾಜಕ್ಕೆ ಋಷಿ ಆದರ್ಶ'**

ನಗರದ ಯಾದವಗಿರಿಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಶನಿವಾರ (ಜೂನ್ 22) 'ಆಧುನಿಕ ಸಮಾಜಕ್ಕೆ ಋಷಿ ಆದರ್ಶ' ಕುರಿತು ಉಪನ್ಯಾಸ ನಡೆಯಲಿದೆ. ಅಂದು ಸಂಜೆ 6ಕ್ಕೆ ಸ್ವಾಮಿ ಮುಕ್ತಿದಾನಂದ ಅವರು ಉಪನ್ಯಾಸ ನೀಡುವರು.

### ಮೃಚ್ಛಕಟಿಕ ರಂಗಪ್ರಯೋಗ



ನಗರದ ನಟನ ರಂಗಶಾಲೆಯು 2019-2020ನೇ ಸಾಲಿನ ಒಂದು ವರ್ಷದ ಅಭಿನಯ ಮತ್ತು 'ರಂಗಸ್ವಾಗತ' ಉದ್ಘಾಟನಾ ಸಮಾರಂಭವನ್ನು ಭಾನುವಾರ (ಜೂನ್ 23) ಹಮ್ಮಿಕೊಳ್ಳಲಾಗಿದೆ.

ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲೇ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಅತಿಥಿಗಳಾಗಿ ಹಿರಿಯ ರಂಗಕರ್ಮಿ ಮೇಕಪ್ ರಾಮಕೃಷ್ಣ, ಕಿರುತೆರೆ ನಟ ರಾಜೇಶ್, ಬಾಲಾಜಿ ಮನೋಹರ್, ಚಲನಚಿತ್ರ ನಟಿ ಸೋನುಗೌಡ ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಮಂಡ್ಯ ರಮೇಶ್ ಅವರ ನಿರ್ದೇಶನದ ಮೃಚ್ಛಕಟಕ ನಾಟಕವೂ ಪ್ರದರ್ಶನಗೊಳ್ಳಲಿದೆ.

ಚಾರುದತ್ತ ವಸಂತ ಸೇನೆಯರ ಪ್ರೇಮಸೂತ್ರ, ಶಕಾರ ವಸಂತ ಸೇನೆಯರ ವ್ಯವಹಾರ ಹಾಗೂ ಶಕಾರ ಚಾರುದತ್ತರ ಸಂಘರ್ಷ ಈ ಮೂರು ಪ್ರಮುಖ ಎಳೆಯಲ್ಲೇ ನಾಟಕ ತೆರೆದುಕೊಳ್ಳುತ್ತಾ ಸಾಗುತ್ತದೆ.

ವಿಪ್ರವಣಿಕ ಚಾರುದತ್ತ. ಗೌರವಾನ್ವಿತ ನಾಯಕ. ಶ್ರೀಮಂತನಾಗಿದ್ದರೂ ತನ್ನ ಉದಾರತೆಯಿಂದ ಬಡವನಾದ ನೀತಿ ಸಂಪನ್ನ, ಗುಣವಂತ, ಅಷ್ಟೈಶ್ವರ್ಯವಂತೆಯಾದ ನಾಯಕಿ, ಗಣಿಕೆ ವಸಂತ ಸೇನೆ. ಈತನ ಗುಣಕ್ಕೆ ಮಾರುಹೋಗಿ ಇವನನ್ನು ಮೋಹಿಸುತ್ತಾಳೆ. ಉಜ್ಜೈನಿಯ ದೊರೆಪಾಲಕನ ಮೈದುನ ಶಕಾರ, ಈತ ಖಳ ಧೂರ್ತ, ಕ್ರೂರಿ, ನೀಚ, ಕೇಡುಗ, ಅಂಜುಬುರಕ. ಇವನ ವೇಷ ನಡೆನುಡಿ ಎಲ್ಲವೂ ಹಾಸ್ಯಾಸ್ಪದ, ತಿರುಗು ಮುರುಗು ಈತನ ಭಾಷೆ ಗ್ರಾಮ್ಯ ಪೆದ್ದು ಪೆದ್ದು ಮಾತು, ವಿದೂಷಕನಾಗಿಬಿಡುವ ಖಳನಾಯಕ. ಈತ ಸುಸಂಸ್ಕೃತಿಯ ವಸಂತ ಸೇನೆಯ ಮೇಲೆ ಕಣ್ಣಿಟ್ಟಿರುತ್ತಾನೆ. ಇಲ್ಲಿನ ಕಥಾ ಜಾಲದಲ್ಲಿ ವಿಧಿಯ ಮೇಲಾಟದಿಂದ ಅನೇಕ ವಿಕ್ಷಿಪ್ತ ಘಟನೆಗಳು ಜರುಗಿ ಚಮತ್ಕಾರಿಕ ತಿರುವನ್ನು ಪಡೆದುಕೊಳ್ಳುವ ಸುಂದರ ಚಿತ್ರಣವನ್ನು ನಾಟಕದಲ್ಲಿ ಕಟ್ಟಿಕೊಟ್ಟಿದ್ದಾರೆ.

### ಜೂನ್ 23, ಭಾನುವಾರ

**'ಭಗವದ್ಗೀತೆ ಮತ್ತು ಕರ್ಮಯೋಗ'**

ನಗರದ ಯಾದವಗಿರಿಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಭಾನುವಾರ (ಜೂನ್ 23) 'ಭಗವದ್ಗೀತೆ ಮತ್ತು ಕರ್ಮಯೋಗ' ಕುರಿತು ಉಪನ್ಯಾಸ ನಡೆಯಲಿದೆ. ಅಂದು ಸಂಜೆ 6ಕ್ಕೆ ಸ್ವಾಮಿ ಮುಕ್ತಿದಾನಂದ ಅವರು ಉಪನ್ಯಾಸ ನೀಡುವರು.

**ಅಂತರಶಾಲಾ ಸಾಂಸ್ಕೃತಿಕ ಹಬ್ಬ**

ಕನಕದಾಸನಗರದಲ್ಲಿರುವ ಆರಿಯಾ ಅಯ್ಯಂಗಾರ್ ಫುಡ್ ಪ್ರಾಡಕ್ಟ್ಸ್ ಮತ್ತು ಆಕಾಶ್ ಕ್ರಿಯೇಷನ್ಸ್ ವತಿಯಿಂದ ಜೂನ್ 23ರಂದು 'ನಿಸರ್ಗ' ಶೀರ್ಷಿಕೆ ಅಡಿಯಲ್ಲಿ ಅಂತರಶಾಲಾ ಸಾಂಸ್ಕೃತಿಕ ಹಬ್ಬವನ್ನು ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 9.30ರಿಂದ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಎಲ್.ನಾಗೇಂದ್ರ ಉದ್ಘಾಟಿಸುವರು. ಅತಿಥಿಯಾಗಿ ಪಾಲಿಕೆ ಸದಸ್ಯರಾದ ಲಕ್ಷ್ಮಿಕಿರಣ್ ಗೌಡ ಭಾಗವಹಿಸುವರು.

**ಸಂಸ್ಮರಣೋತ್ಸವ**



ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಮೈಸೂರು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ತುಮಕೂರಿನ ಸಿದ್ಧಗಂಗಾ ಮಠದ ಶತಾಯುಷಿ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಅವರ ಸಂಸ್ಮರಣೋತ್ಸವವನ್ನು ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿನ ಪರಿಷತ್ತಿನ ಗೃಹ ಕಚೇರಿಯಲ್ಲಿ ಜೂನ್ 23ರಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ. ಆಸಕ್ತರು ಭಾಗವಹಿಸಲು ಕೋರಲಾಗಿದೆ.

# ಜ್ಞಾನ ಸಂತಾನಕ್ಕಾಗಿ ವಿವಾಹ ಸಂಸ್ಕಾರ

ತಾರೋಡಿ ಸುರೇಶ



**ವಿವಾಹ** ಸಂಸ್ಕಾರದ ವಿವಿಧ ಹೆಸರುಗಳ ವಿವರಗಳನ್ನು ನೋಡುತ್ತಿದ್ದೆವು. 'ನಿನ್ನ ಹೃದಯ ನನ್ನದಾಗಲಿ, ನನ್ನ ಹೃದಯ ನಿನ್ನದಾಗಲಿ' ಎನ್ನುವ ಸಂಕಲ್ಪದಿಂದ ವಿಶಿಷ್ಟವಾಗಿ ಕೈ ಹಿಡಿಯುವ ಕ್ರಮವಿದಾಗಿರುವುದರಿಂದ ಪಾಣಿಗ್ರಹಣವೆಂಬ ಹೆಸರು. ವರನು ವಧುವನ್ನು ತನ್ನ ಬಳಿಗೆ ಕರೆದುಕೊಳ್ಳುವಾಗ ಸಂಯಮದಿಂದ ಕೂಡಿದ್ದು, ಧರ್ಮರೂಪವಾದ ಒಂದು ಚೌಕಟ್ಟಿಗೆ ಒಳಪಡುವಂತಹ ದಿವ್ಯ ಭಾವವನ್ನು ಹೊಂದುವುದಕ್ಕೆ ಉಪಯಮ ಎಂದು ಹೆಸರು.

ಪಶು-ಪ್ರಾಣಿಗಳಲ್ಲಿ ವಿಶೇಷ ಸಂಕಲ್ಪವೇನೂ ಇರುವುದಿಲ್ಲ. ಅವು ಇಂದ್ರೀಯ ಪ್ರೇರಣೆಗೆ ಅನುಗುಣವಾಗಿ ಸೇರುತ್ತವೆ. ಮನುಷ್ಯನಲ್ಲಿಯೂ 'ವಯಸ್ಸಾಯಿತು, ಮದುವೆ ಮಾಡಿಬಿಡಿ' ಎನ್ನುವ ಧೋರಣೆಯಿದ್ದಲ್ಲಿ, ಅದು ಪ್ರಾಣಿಗಳ ಜೀವನವೇ ಆಯಿತು. ಆದರೆ ಜ್ಞಾನಿಗಳು ಇನ್ನೂ ಕೆಲವು ಪಾತ್ರತೆಯನ್ನು ಗಮನಿಸಿದ್ದಾರೆ. ಅಂತಹ ಪಾತ್ರತೆ ಇದ್ದಲ್ಲಿ ವಿವಾಹವು ಸಂಸ್ಕಾರ ರೂಪದಲ್ಲಿ ನಡೆದು ಶುದ್ಧಿಯನ್ನು ಉಂಟು ಮಾಡುತ್ತದೆ. ವರನು ಗುರುಕುಲದಲ್ಲಿ ಬ್ರಹ್ಮಚಾರಿಯಾಗಿ ಅಧ್ಯಯನ ನಡೆಸಿ ಸ್ನಾತಕನಾಗುತ್ತಾನೆ.

ಪ್ರಜಾತಂತುವನ್ನು ಕಡಿಯಬೇಡ ಎಂದು ಗುರು ಆದೇಶ ನೀಡಿ ಗೃಹಸ್ಥಾಶ್ರಮ ಸ್ವೀಕರಿಸಲು ಅನುಮತಿಸುತ್ತಾನೆ. ಸೂರ್ಯನಿಂದ ಬೆಳಕನ್ನು ಪಡೆಯುವಂತೆ ಗುರುವಿನಿಂದ ಜ್ಞಾನವನ್ನು ಪಡೆದಿರುವ ಬ್ರಹ್ಮಚಾರಿಯು, ಧರ್ಮ ಸಂತಾನವನ್ನು ಪಡೆಯಲು ವಿವಾಹ ಮಾಡಿಕೊಳ್ಳುತ್ತಾನೆ. ಗುರು ಕೊಟ್ಟ ಶಿಕ್ಷಣದಂತೆ ಜ್ಞಾನಿಯಾಗಿ, ಆ ಜ್ಞಾನನೇತ್ರದಿಂದ ಜೀವನವನ್ನು ನಡೆಸಬಲ್ಲ ಯೋಗ್ಯತೆಯನ್ನು ಹೊಂದಿರುವವನು ಯುಕ್ತ ವಯಸ್ಸಿನಲ್ಲಿ ವಿವಾಹಿತನಾಗಬೇಕು. 'ವಿದ್ಯಾಂಚ ವಿತ್ತಂಚ ವಪುಃ ವಯಶ್ಚ' ಎಂದು ಸೂಚಿಸುವಾಗ ವಯಸ್ಸನ್ನು ಕೊನೆಯಲ್ಲಿ ಹೇಳಿದ್ದಾರೆ. ಅವನು ಪಡೆದಿರುವ ವಿದ್ಯೆಯಾದರೂ ವಿದ್ ಜ್ಞಾನೇ ಎನ್ನುವಂತೆ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿಸುವಂತಹದ್ದು. ಅದು ಕೇವಲ ಎಂ.ಎ, ಪಿಎಚ್.ಡಿ ತರಹದ್ದಲ್ಲ.

ವಧು-ವರರ ನಡುವೆ ನಡೆಯುವ ಸಂಭಾಷಣೆಯೂ ಇದಕ್ಕೆ ಸಾಕ್ಷಿಯಾಗಿದೆ. ವಧುವು ವರನನ್ನು ಕುರಿತು 'ತಪಸ್ಸಿನಿಂದ ಜ್ಞಾನಿಯಾಗಿರುವ ನಿನ್ನನ್ನು ನಾನು ನೋಡುತ್ತಿದ್ದೇನೆ. ನಿನ್ನಂತಹ ಜ್ಞಾನಿಯಾದ ಸತ್ಪುತ್ರನನ್ನು ನಾನು ಆಶಿಸುತ್ತೇನೆ. ಆ ದೃಷ್ಟಿಯಿಂದ ನೀನು ನನ್ನನ್ನು ಸೇರು' ಎಂದರೇ, ವರನೂ ಕೂಡ 'ಜ್ಞಾನಿಯಾಗಿರುವ ನಿನ್ನನ್ನು ನಾನೂ ನೋಡುತ್ತಿದ್ದೇನೆ' ಎಂದು ಪರಮಾತ್ಮನ ಸ್ಮರಣೆಯಿಂದ ಹೇಳುತ್ತಾನೆ.

ಜ್ಞಾನಿಗಳಾದ ವಧು-ವರರು ಧರ್ಮ ಸಂತಾನವನ್ನು ಬಯಸಿ, ಒಂದು ಧರ್ಮದ ಕಟ್ಟುಪಾಡಿಗೆ ಒಳಪಟ್ಟು ಗೃಹಸ್ಥ ಜೀವನಕ್ಕೆ ಹೆಜ್ಜೆಯಿಡುವ ಇಂಥ ದೃಶ್ಯಗಳು ಅದೆಷ್ಟು ಮನೋಹರವಾಗಿವೆ! ಅಲ್ಲಿ ವಧು-ವರರ, ಸಮಾರಂಭದಲ್ಲಿ ಭಾಗವಹಿಸಿರುವ ಬಂಧು-ಬಾಂಧವರ, ಇಷ್ಟರ ಎಲ್ಲರ ಮನಸ್ಸನ್ನೂ ಇಂಥ ಪರಮಾತ್ಮನ ಸ್ಮರಣೆಯಲ್ಲಿ ಮುಳುಗಿಸಿ ಶುದ್ಧಗೊಳಿಸುವ ಅದ್ಭುತವಾದ ಯೋಜನೆಯನ್ನು ಋಷಿಗಳು ಹೆಣೆದಿದ್ದಾರೆ. ಹಾಗಿದ್ದಲ್ಲಿ ತಾನೇ ಜೀವನವು ಪಶುಸ್ತರದಲ್ಲಿಯೇ ನಿಲ್ಲದೆ ಮಾನವನ ಸಹಜ ಯೋಗ್ಯತೆಯಾದ ಯೋಗ-ಭೋಗ ಎರಡನ್ನೂ ಪಡೆದು ಪೂರ್ಣಜೀವನವನ್ನು ನಡೆಸಿದಂತಾಗುತ್ತದೆ.

'ಜಾಮಾತಾ ವಿಷ್ಣುವತ್ಪೂಜ್ಯಃ' ಎಂದು ಅಳಿಯನನ್ನು ಪೂಜಿಸುವ ಪದ್ಧತಿಯಿದೆ. ಶ್ರೀಧರ ಸ್ವರೂಪ- ಪರಮೇಶ್ವರ ಸ್ವರೂಪ ಎಂಬುದಾಗಿ ಪೂಜೆಯನ್ನು ಕೈಗೊಳ್ಳಬೇಕಾದಲ್ಲಿ ಎಂತಹ ಯೋಗ್ಯತೆ ಅಳಿಯನಾಗುವವನಲ್ಲಿ ಇರಬೇಕು. ಅದು ಕಾಲ ಕ್ರಮದಲ್ಲಿ 'ಜಾಮಾತಾ ದಶಮೋಗ್ರಹಃ' ಎಂದಾಗಿಬಿಟ್ಟಿದೆ. ಅನ್ಯ ಒಂಬತ್ತು ಗ್ರಹಗಳ ಗತಾಗತಿಯನ್ನು ನಿರ್ಣಯಿಸಿ ಹೇಳಬಹುದು. ಆದರೆ ಈ ಅಳಿಯ ಎನ್ನುವಂತಹ ಹತ್ತನೇ ಗ್ರಹವು ಯಾವಾಗ ಹೇಗೆ ವರ್ತಿಸುತ್ತದೆ ಎನ್ನುವುದು ಊಹಾತೀತ. ಇದು ಎಲ್ಲರ ಅನುಭವದಲ್ಲಿರುವಂತಹದ್ದೇ. ಋಷಿ ಸಂಸ್ಕೃತಿಯ ಅಪಮೌಲ್ಯವನ್ನು ಇದು ಎತ್ತಿ ತೋರಿಸುತ್ತದೆ.

ಶ್ರೀರಂಗ ಮಹಾ ಗುರುಗಳು 'ಅಳಿಯ ಎಂದರೇ ಅಳಿಯದೆ ಇರುವವನು, ಅವನು ಅಚ್ಯುತ ಎನ್ನುವ ಅರ್ಥದಲ್ಲಿ ಬಂದಿದೆಯಪ್ಪ' ಎಂದು ವಿವರಿಸಿದ್ದರು.

(ಮುಂದುವರೆಯುತ್ತದೆ)

# ಪರ್ವತ ಏರಿದ ಹಾಡಿ ಮಕ್ಕಳು...

ಒಂದನೇ ಪುಟದಿಂದ

**ಶಾಲೆಗಳ** ದತ್ತು, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ, ಶಾಲಾ ಕೊಠಡಿ ಮತ್ತು ಶೌಚಾಲಯ ನಿರ್ಮಾಣ, ಶೈಕ್ಷಣಿಕ ಪ್ರಗತಿಗೆ ಉಪಕರಣಗಳನ್ನು ಸಂಸ್ಥೆಯಿಂದ ನೀಡುತ್ತಿದ್ದೆ. ಆದರೆ, ಟೈಗರ್ ಅಡ್ವೆಂಚರ್ ಫೌಂಡೇಷನ್, ಬುಡಕಟ್ಟು ಮಕ್ಕಳನ್ನು ಹಿಮಾಲಯ ಚಾರಣಕ್ಕೆ ಸಿದ್ಧಗೊಳಿಸುತ್ತಿದೆ ಎಂದು ಸೋಲಂಕಿಯವರು ಹೇಳಿದರು. ಆಗ 'ಹಾಡಿ ಮಕ್ಕಳಿಗೆ ವೇದಿಕೆ ಒದಗಿಸುತ್ತಿರುವುದು ನಮಗೆ ಖುಷಿ' ಎಂದು ಲೇಡಿಸ್ ಸರ್ಕಲ್ ಇಂಡಿಯಾ ಕೈಜೋಡಿಸಿತು.

ಅಷ್ಟೇ ಅಲ್ಲ ವಿವಿಧ ರಾಜ್ಯಗಳ ನಮ್ಮ ಸಂಘಟನೆಯಿಂದ ₹ 1.40 ಲಕ್ಷ ನೀಡಿದ್ದೆವು. ಹಾಡಿ ಮಕ್ಕಳೊಂದಿಗೆ ಯಶಸ್ವಿ ಯಾಗಿ ಚಾರಣ ಪೂರೈಸಿದ ಎಲ್ಲರನ್ನು ಅಭಿನಂದಿಸುವುದಾಗಿ ಹೇಳಿದರು ಎಂದು ಅಧ್ಯಕ್ಷೆ ನಮ್ರತಾ ಶೆಣೈ.



ಚಾರಣಕ್ಕೆ ಹೊರಡುವ ಮುನ್ನ ರಂಗಾಯಣದ ಚಿಣ್ಣರ ಮೇಳದಲ್ಲಿ ಶುಭಕೋರಿದ ಸಂದರ್ಭ

### ಚಾರಣಕ್ಕೆ ಸಿದ್ಧತೆ ಹೇಗೆ?



ಸುಮಾರು ಹತ್ತು ತಿಂಗಳ ಕಾಲ ನಿತ್ಯ ಪ್ರ್ಯಾಕ್ಟಿಸ್ ನಡೆದಿದೆ. ಅದರಲ್ಲೂ 3 ತಿಂಗಳು ದೈಹಿಕ ತರಬೇತಿ ಮುಖ್ಯ. ಚಾಮುಂಡಿಬೆಟ್ಟ, ಕುಂತಿ ಬೆಟ್ಟ, ಕಬಿನಿ ಹಿನ್ನೀರು ಪ್ರದೇಶ ಚಾರಣದ ಕಠಿಣ ತರಬೇತಿ, ಗಂಗೋತ್ರಿ ಹಾಗೂ ಮಹಾರಾಜ್ ಕಾಲೇಜಿನ ಹಾಕಿ ಮೈದಾನದಲ್ಲಿ ಜಂಪಿಂಗ್, ರನ್ನಿಂಗ್ ತರಬೇತಿಯನ್ನು ನಂಜುಂಡಸ್ವಾಮಿ, ಶರತ್ ಎನ್., ನಾಗೇಶ್ ಕುಮಾರ್ ಡಿ. ಮತ್ತು ಹರ್ಷವರ್ಧನ್ ನೀಡಿದ್ದಾರೆ. ಚಾರಣಿಗರಿಗೆ ದೈಹಿಕ ಸಾಮರ್ಥ್ಯ ಬಲು ಮುಖ್ಯ. ಅದರೊಂದಿಗೆ ಮಾನಸಿಕ ಸ್ಥೈರ್ಯವೂ ಅಷ್ಟೇ ಮುಖ್ಯ. ನಾನು ಚಾರಣ ಮಾಡಬಲ್ಲೆ, ನನ್ನಿಂದ ಅದು ಆಗುತ್ತವೆ ಎಂಬ ಆತ್ಮವಿಶ್ವಾಸದಿಂದ ಆತ ಕಾರ್ಯ ಆರಂಭಿಸಬೇಕು.

ಇದನ್ನು ತರಬೇತಿಯಲ್ಲಿ ಪರಿಣತರು ಹಾಗೂ ಕೌನ್ಸಿಲರ್‌ಗಳು ಮನದಟ್ಟು ಮಾಡಿಕೊಡುತ್ತಾರೆ. ಅದರೊಂದಿಗೆ ಚಾರಣಕ್ಕೆ ಹೊರಡಲು ಇನ್ನೆರಡು ದಿನ ಇರುವಾಗ 10 ಕಿ.ಮೀ ದೂರ ಜೋಶ್ ರನ್ ಮಾಡಿಸಲಾಗಿತ್ತು. ದೂರದ ಓಟದಿಂದ ಚಾರಣಿಗರಲ್ಲಿ ಹುರುಪು ಉತ್ಸಾಹ ಹೆಚ್ಚುತ್ತದೆ. ಇಷ್ಟೊಂದು ಓಡುವ ನನಗೆ ಚಾರಣ ಸಾಧ್ಯ ಎಂಬ ಭಾವ ಪ್ರತಿಯೊಬ್ಬರಲ್ಲೂ ಮೂಡುತ್ತದೆ. ಅದನ್ನು ತರಬೇತಿದಾರರು ಹಾಗೂ ಟೀಮ್ ಲೀಡರ್ ಮಾಡಿಸಿದ್ದರು.

# ಮುಖ್ಯಮಂತ್ರಿ ಗ್ರಾಮ ವಾಸ್ತವ್ಯ ಜನರಿಗೇನು ಪ್ರಯೋಜನ?

ಜನದನಿ

ಹಿಂದೆ ಬಿಜೆಪಿ- ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಗ್ರಾಮ ವಾಸ್ತವ್ಯ ಮಾಡಿದ್ದರು. ಇದರಿಂದ ಕುಮಾರಸ್ವಾಮಿ ಅವರಿಗೆ ಒಳ್ಳೆಯ ಹೆಸರು ಬಂದಿತ್ತು. ಈಗ ಜೆಡಿಎಸ್- ಕಾಂಗ್ರೆಸ್ ಮೈತ್ರಿ ಸರ್ಕಾರವಿದ್ದು, ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಗ್ರಾಮ ವಾಸ್ತವ್ಯಕ್ಕೆ ಮರು ಚಾಲನೆ ನೀಡಿದ್ದಾರೆ. ಗುರುಮಠಕಲ್ ತಾಲ್ಲೂಕಿನ ಚಂಡರಕಿ ಗ್ರಾಮದಲ್ಲಿ ಜೂನ್ 21ರಂದು ವಾಸ್ತವ್ಯ ಹೂಡಿದ್ದಾರೆ. ಜನರ ಸಮಸ್ಯೆಗಳನ್ನು ಬಗೆಹರಿಸಲು ಈ ಕಾರ್ಯಕ್ರಮ ಸಾಕ್ಷಿಯಾಗಲಿದೆಯೇ ಅಥವಾ ಮತ್ತೊಂದು ರಾಜಕೀಯ ಕಾರ್ಯಕ್ರಮವಾಗಲಿದೆಯೇ ಎಂಬುದರ ಬಗ್ಗೆ ಜನರ ಅನಿಸಿಕೆ ಇಲ್ಲಿದೆ.

### ಪ್ರಚಾರದ ಕಾರ್ಯಕ್ರಮ ಆಗದಿರಲಿ



ಮುಖ್ಯಮಂತ್ರಿ ಗ್ರಾಮ ವಾಸ್ತವ್ಯ ಮಾಡಿದಾಗ ಆ ಗ್ರಾಮದಲ್ಲಿರುವ ರಸ್ತೆ, ಚರಂಡಿ ಸೇರಿದಂತೆ ಕೆಲ ಸಮಸ್ಯೆಗಳನ್ನು ತರಾತುರಿಯಲ್ಲಿ ಬಗೆಹರಿಸಲಾಗುತ್ತದೆ. ಇದರಿಂದ ಆ ಗ್ರಾಮದ ಜನರ ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರ ಸಿಗುತ್ತದೆ. ಆದರೆ, ವಾಸ್ತವ್ಯದ ನೆಪದಲ್ಲಿ ಮುಖ್ಯಮಂತ್ರಿಯಾದಿಯಾಗಿ ಜಿಲ್ಲಾ ಉಸ್ತುವಾರಿ ಸಚಿವರು 10 ಪಟ್ಟು ಹೆಚ್ಚು ಪ್ರಚಾರ ಗಿಟ್ಟಿಸಿಕೊಳ್ಳುತ್ತಾರೆ. ಈ ಕಾರ್ಯಕ್ರಮ ಪ್ರಚಾರಕ್ಕಿಂತ ಜನರಿಗೆ ಅನುಕೂಲ ಕಲ್ಪಿಸುವ ಕಡೆಗೆ ಹೆಚ್ಚು ಒತ್ತು ನೀಡಬೇಕು.

**ಮಂಜೇಗೌಡ,** ವಿದ್ಯಾರಣ್ಯಪುರಂ

### ಜನರಿಗೆ ನೀಡಿದ ಆಶ್ವಾಸನೆ ಈಡೇರಿಸಲಿ



ಗ್ರಾಮ ವಾಸ್ತವ್ಯ ಒಳ್ಳೆಯ ಕಾರ್ಯಕ್ರಮ. ಜನರ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಇದು ಒಳ್ಳೆಯ ವೇದಿಕೆ. ಇದನ್ನು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಜನರಿಗೆ ನೀಡಿದ ಆಶ್ವಾಸನೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

**ಬಾಲಕೃಷ್ಣನ್,** ಕೆ.ಜಿ.ಕೊಪ್ಪಲು

### ಪ್ರಚಾರಕ್ಕಾಗಿ ಗ್ರಾಮ ವಾಸ್ತವ್ಯ



ಈ ಕಾರ್ಯಕ್ರಮದಿಂದ ಯಾವುದೇ ಅನುಕೂಲ ಇಲ್ಲ. ಪ್ರಚಾರಕ್ಕಾಗಿ ಗ್ರಾಮ ವಾಸ್ತವ್ಯ ಮಾಡುತ್ತಿದ್ದಾರೆ. ಮನೆ ಅಥವಾ ಶಾಲೆಯಲ್ಲಿ ಉಳಿದು, ಊಟ ಮಾಡಿ ಬರುತ್ತಾರೆ. ಮತ್ತೆ ಆ ಕಡೆ ತಿರುಗಿಯೂ ನೋಡುವುದಿಲ್ಲ. ಜನರ ಕಷ್ಟಗಳನ್ನು ಕೇಳಿ ಸ್ಥಳದಲ್ಲೇ ಬಗೆಹರಿಸಬೇಕು. ಪಿಂಚಣಿ ಇಲ್ಲದವರಿಗೆ ಸ್ಥಳದಲ್ಲೇ ಮಾಡಿಸಿಕೊಡಬೇಕು. ಆಗ ಈ ಕಾರ್ಯಕ್ರಮಕ್ಕೆ ಅರ್ಥ ಬರುತ್ತದೆ.

**ಏಕನಾಥ,** ಸರಸ್ವತಿಪುರಂ

### ಅಧಿಕಾರಿಗಳ ಸಹಕಾರವೂ ಮುಖ್ಯ



ಗ್ರಾಮ ವಾಸ್ತವ್ಯದ ಸಂದರ್ಭದಲ್ಲಿ ಮುಖ್ಯಮಂತ್ರಿ ನೀಡುವ ಭರವಸೆಗಳನ್ನು ಈಡೇರಿಸಬೇಕು. ಕೆಲವೊಂದನ್ನು ಸ್ಥಳದಲ್ಲೇ ಪರಿಹರಿಸಬೇಕು. ಮತ್ತೆ ಕೆಲ ಸಮಸ್ಯೆಗಳನ್ನು ತಕ್ಷಣಕ್ಕೆ ಈಡೇರಿಸಲು ಸಾಧ್ಯವಿಲ್ಲ. ಅಂತಹ ಸಮಸ್ಯೆಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಪರಿಹರಿಸಬೇಕು. ಅಧಿಕಾರಿಗಳು ಸಹ ಒಳ್ಳೆಯ ಸಹಕಾರ ನೀಡಬೇಕು.

**ರವಿಕುಮಾರ್,** ಶಕ್ತಿನಗರ

### ಜನರ ಕಷ್ಟ, ಸುಖ ಅರಿಯಲು ಸಾಧ್ಯ



ಮುಖ್ಯಮಂತ್ರಿ, ಸಚಿವರು ಜನರೊಂದಿಗೆ ಬೆರೆತಾಗ ಮಾತ್ರ ಅವರ ಕಷ್ಟ ಸುಖಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಹಳ್ಳಿಗಳಲ್ಲಿ ವಾಸ್ತವ್ಯ ಮಾಡಿ ಅಲ್ಲಿನ ತಳಮಟ್ಟದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬಹುದು. ಆ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕು. ಮೂಲಸೌಕರ್ಯ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಈ ಕಾರ್ಯಕ್ರಮ ಸಾರ್ಥಕವಾಗುತ್ತದೆ.

**ಪದ್ಮಾ,** ಗಂಗೋತ್ರಿ ಬಡಾವಣೆ

### ವಾರದಲ್ಲಿ ಒಂದು ದಿನ ಜಿಲ್ಲೆಗೆ ಭೇಟಿ ಕೊಡಲಿ



ಕುಮಾರಸ್ವಾಮಿ ಅವರು ಈ ಹಿಂದೆಯೂ ಗ್ರಾಮ ವಾಸ್ತವ್ಯ ಮಾಡಿದ್ದಾರೆ. ಅವರು ಭೇಟಿ ಕೊಟ್ಟ ಗ್ರಾಮಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗಿಲ್ಲ. ವಾಸ್ತವ್ಯಕ್ಕಾಗಿ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ. ಗ್ರಾಮದಲ್ಲಿ ಹೋಗಿ ಮುದ್ದೆ, ಕೋಳಿ ಸಾರು ತಿಂದು ಬರುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದರ ಬದಲಿಗೆ ಪ್ರತಿ ವಾರ ಒಂದೊಂದು ಜಿಲ್ಲೆಗೆ ಭೇಟಿ ನೀಡಿ, ಆ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಪರಿಹಾರಗಳನ್ನು ಸ್ಥಳದಲ್ಲೇ ಸೂಚಿಸಬೇಕು.

**ನಾಗಭೂಷಣ್,** ಸರಸ್ವತಿಪುರಂ

### ರಾಜಕೀಯ ದೊಂಬರಾಟವಾಗದಿರಲಿ



ಮುಖ್ಯಮಂತ್ರಿ ಅವರ ಗ್ರಾಮ ವಾಸ್ತವ್ಯ ಹಳ್ಳಿಗಳ ಮೂಲ ಸಮಸ್ಯೆಗಳನ್ನು ಅರಿಯುವ ದೃಷ್ಟಿಯಿಂದ ಉತ್ತಮವಾದ ಕಾರ್ಯಕ್ರಮ. ಆದರೆ, ಅಲ್ಲಿಗೆ ಹೋಗಿ ಬಂದ ಬಳಿಕ ನಿಜವಾಗಿ ಏನಾದರೂ ಬದಲಾವಣೆ ಕಾಣಬೇಕು. ಆಗ ಈ ಕಾರ್ಯಕ್ರಮಕ್ಕೆ ಅರ್ಥ ಹಾಗೂ ಮೌಲ್ಯ ಸಿಗುತ್ತದೆ. ಇಲ್ಲವಾದರೆ ಇದು ಮತ್ತೊಂದು ರಾಜಕೀಯ ದೊಂಬರಾಟವಾಗುತ್ತದೆ.

**ಆರ್. ಗಾಯತ್ರಿ,** ಹೆಬ್ಬಾಳ

ನಿರೂಪಣೆ: ಎನ್‌ನವೀನ್‌ಕುಮಾರ್

## ಚಿಣ್ಣರ ಚಿತ್ರ





ಪ್ರಮತಿ ಹಿಲ್‌ವ್ಯೂ ಅಕಾಡೆಮಿಯ 2ನೇ ತರಗತಿ ವಿದ್ಯಾರ್ಥಿನಿ ಎನ್.ಎ.ಅನ್ವಿತಾ ಬಿಡಿಸಿದ ಚಿತ್ರ

## ನೀವೂ ಕಳುಹಿಸಿ



'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...

ಇ ಮೇಲ್: mysoremetro@prajavani.co.in

ವಾಟ್ಸ್‌ಆ್ಯಪ್; 95133 22937